ಪ್ರೊಟೆಕ್ಟ್ ಮಾಡಬೇಕು, ಹೇಳಿ? ಇಲ್ಲವಾದರೆ ಈ ಗಂಡಸರು' ಎಂದವಳು ಥಟ್ಟನೇ ಮಾತು ನಿಲ್ಲಿಸಿದಳು.

'ಹ್ಞೂಂ. ಹೌದು. ಸಮಾಜ ಈಗ ಬಹಳ ಕೆಟ್ಟದಾಗಿದೆ. ನಮ್ಮ ಜಾಗ್ರತೆ ನಾವು ಮಾಡಿಕೊಳ್ಳಬೇಕು.'

'ಅಲ್ವಾ? ಪ್ರದೀಪ್‌ಗೆ ಇದೆಲ್ಲಾ ಸೂಕ್ಷ್ಮ ಅರ್ಥವೇ ಆಗಲ್ಲ. ಅವರು ಅನಾಥರಾಗಿ ಬೆಳೆದವರಲ್ವಾ, ಹಾಗಾಗಿ.

'ಹೌದಾ. ಈ ಸಂಗತಿ ನನಗೆ ಅವರು ಹೇಳಲೇ ಇಲ್ಲ ನೋಡು.'

'ಹೌದು ಮೇಡಮ್. ಹಾಗಾಗಿ ಅವರು ಸ್ವಲ್ಪ ಒರಟು. ಅವ್ರಿಗೆ ಸರಿಯಾದ ಬಾಲ್ಯ ಸಿಕ್ಕಲಿಲ್ಲ. ಎಲ್ಲೋ, ಹೇಗೋ ಅಲ್ಲಿಲ್ಲಿ ಕೆಲಸ ಮಾಡಿಕೊಂಡು ಬೆಳೆದು ಈಗ ಈ ಹಂತ ತಲುಪಿದ್ದಾರೆ' ಎಂದಳು. ಅವರಿಗೆ ಬೇಕಿದ್ದ ಪೀಠಿಕೆ ದೊರೆತಾಗ ಡಾ. ರೂಪಾರ ಹಾದಿ ಸುಗಮವಾಗಿತ್ತು.

'ಈ ವಿಷಯದಲ್ಲಿ ನೀನು ಅದೃಷ್ಟವಂತಳು ಅಲ್ವಾ? ನೀನು ನಿನ್ನ ಹೆತ್ತವರಿಗೆ ಒಬ್ಬಳೇ ಮಗಳು. ನಿನಗೆ ಪ್ರೀತಿಯ ಧಾರೆಯನ್ನೇ ಎರೆದು ಬೆಳೆಸಿದ್ದಾರೆ.'

ನಿವೇದಿತಾ ತಕ್ಷಣಕ್ಕೆ ಸ್ಪಂದಿಸಲಿಲ್ಲ. ಕೆಲವು ಕ್ಷಣಗಳ ಮೌನದ ನಂತರ ಉತ್ಸಾಹವಿಲ್ಲದವಳಂತೆ ಉತ್ತರಿಸಿದಳು, 'ಹೌದು. ನಾನು ಈ ವಿಚಾರದಲ್ಲಿ ತುಂಬಾ ಲಕ್ಕಿ' ತಣ್ಣಗಿನ ಧ್ವನಿಯಲ್ಲಿ ಉತ್ತರಿಸಿದಳು.

'ನೀನು ಯಾವ ಕಾಲೇಜ್?' – ನಿವಿ ಆಕೆಯ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೋದಳು.

'ನಿನ್ನ ಅಪ್ಪ–ಅಮ್ಮ ಸಂಪ್ರದಾಯಸ್ಥರು. ಆದರೂ ನಿನ್ನ ಮದುವೆ ಸ್ವಲ್ಪ ತಡವಾಗೇ ಆಯಿತು. ಅಲ್ವಾ? ಯಾಕೆ ಜಾತಕ ಹೊಂದಾಣಿಕೆ ಸಮಸ್ಯೆನಾ ಅಥವಾ ನೀನು ಯಾವ ಹುಡುಗನನ್ನೂ ಒಪ್ಪಲಿಲ್ಲವಾ?'

'ಎರಡೂ ಇತ್ತು. ನನಗೆ ಮದುವೆ ಬೇಡವೆಂದೇ ಇತ್ತು. ಮದುವೆ, ಮಗು ಇಷ್ಟೇ ಜೀವನ ಅಲ್ಲಾ ಅಲ್ವಾ? ನನಗೆ ಸ್ವಾವಲಂಬಿಯಾಗಿ ಬದುಕಬೇಕು ಅಂತ ಆಸೆ ಇತ್ತು. ಈ ಪ್ರದೀಪ ಹಿಂದೆ ಬಿದ್ದು, ನನ್ನ ಅಪ್ಪ ಅಮ್ಮನ ತಲೆ ಕೆಡಿಸಿ ನನ್ನ ಮದ್ವೆ ಆದ್ರು'.

'ಅತ್ತೆ, ಮಾವ, ನಾದಿನಿ, ಮೈದುನ ಅಂತ ಯಾರ ಕಾಟವೂ ಇರಲ್ಲ. ನೀನು ಹಾಯಾಗಿ ಜೀವನ ನಡೆಸಬಹುದು ಅಂತ ಅವರ ಯೋಚನೆ ಇರಬೇಕು ಅಲ್ವಾ?'

'ಇರಬಹುದು'.

'ನಿನಗೆ ಆ ಥರದ ಫ್ಯಾಮಿಲಿ ಬಾಂಡಿಂಗ್ ಬೇಕು ಅಂತ ಅನ್ನಿಸಲ್ವಾ? ನಿನ್ನ ಮನೇಲಿ ಸಂಬಂಧಗಳ ಒಡನಾಟ ಜಾಸ್ತಿ. ನೆಂಟರು ಬಂದು ಹೋಗಿ ಮಾಡಲ್ವಾ?'

ನಿವಿ ತುಸು ಸಮಯ ತೆಗೆದುಕೊಂಡೇ ಉತ್ತರಿಸಿದಳು, 'ಬರ್ತಾರೆ. ನನಗೆ ಇಷ್ಟವಿಲ್ಲ. ಆದ್ರೆ ಅಪ್ಪ ಅಮ್ಮಂಗೆ ಹೇಳೋಕಾಗದೇ ಸುಮ್ನಾಗ್ತೀನಿ'.

'ನೀನು ಅದೇ ವಾತಾವರಣದಲ್ಲಿ ಬೆಳೆದು ನಿನಗೆ ಯಾಕೆ ಇಷ್ಟವಿಲ್ಲ?'

'ಕೆಲವು ಸರಿಯಿರಲ್ಲ. ನನಗೆ ಇಷ್ಟವಾಗದೇ ಇರೋರು ಇರ್ತಾರೆ. ಅದರೆ ಅಪ್ಪ ಅಮ್ಮಂಗೆ ಅವ್ರು ತುಂಬಾ ಇಷ್ಟ. ಆಗ ನನಗೆ ಏನೂ ಮಾಡಲು ಆಗುವುದಿಲ್ಲ.'

'ಹೋಗಲಿ ಬಿಡು. ನಿನ್ನ ಸ್ಕೂಲ್ ಡೇಸ್ ಬಗ್ಗೆ ಹೇಳಲೇ ಇಲ್ಲ. ನೀನು ರ್‍ಯಾಂಕ್ ಸ್ಟೂಡೆಂಟಾ, ಹೇಗೆ?'

'ಹೌದು. ಎಲ್ಲಾ ತರಗತೀಲೂ ನಾನೇ ಫಸ್ಟ್. ಅದನ್ನು ಬಿಟ್ಟೇ ಕೊಟ್ಟಿಲ್ಲ ನಾನೂ' ನಿವಿ ಹೆಮ್ಮೆಯಿಂದ ಉತ್ತರಿಸಿದಳು.

'ಯಾವತ್ತೂ ಫೇಲ್ ಅನ್ನೋ ಮಾತೇ ಇಲ್ಲ ಅಲ್ವಾ?'

'ಹೌದು.'

'ನಿನ್ನ ಬಾಲ್ಯದಲ್ಲಿ ನೀನು ಆತ್ಮವಿಶ್ವಾಸದ ಬುದ್ಧಿವಂತ ಹುಡುಗಿ. ನಿನ್ನಪ್ಪ ಅಮ್ಮ ಇಬ್ಬರೂ ಕೆಲ್ಸಕ್ಕೆ ಹೋಗ್ತಿದ್ರಂತೆ. ನೀನೇ ಒಂಟಿಯಾಗಿ ಮನೆಯನ್ನೂ ನಿರ್ವಹಿಸುತ್ತಿದ್ದಿಯಂತೆ.'

'...'

'ನಿನ್ನ ಬಾಲ್ಯ ಹೇಗಿತ್ತು?'

'ಎಲ್ಲರ ಬಾಲ್ಯ ಹೇಗಿರುತ್ತೋ. ಹಾಗೇ ಇರುತ್ತೆ. ಅದರಲ್ಲಿ ವಿಶೇಷವಾಗಿದ್ದು ಏನಿದೆ?' ನಿವಿಯ ದನಿಯಲ್ಲಿ ಕಂಡೂ ಕಾಣದಂತೆ ಸ್ವಲ್ಪ ಕಾಠಿಣ್ಯ ಬೆರೆಯಿತು. ಅವಳ ಮುಖಭಾವವೂ ಏಕಾಏಕಿ ಬದಲಾಗಿತ್ತು. ಯಾವುದೋ ಬಿರುಗಾಳಿ ಒಳಗೆ ಎದ್ದಂತೆ ಅವಳು ಕುಳಿತಲ್ಲೇ ತಳಮಳಿಸಿದಳು. ಪರಿಸ್ಥಿಯ ಅರಿವಾದ ಡಾ. ರೂಪಾ ಅಂದಿನ ಸೆಷನ್ ಅಲ್ಲಿಗೇ ನಿಲ್ಲಿಸುತ್ತಾ, 'ಸರಿ. ಇವತ್ತು ಸಾಕು. ರಿಲ್ಯಾಕ್ಸ್ ಮಾಡು' ಎಂದರು. ಅವರು ಮೊಟಕುಗೊಳಿಸಿದ್ದು ನಿವಿಗೂ ಸಮಾಧಾನ ಮೂಡಿತು. ಅಲ್ಲಿ ಅರೆ ನಿಮಿಷವೂ ಕುಳಿತುಕೊಳ್ಳದೆ, ಧನ್ಯವಾದಗಳನ್ನೂ ಅರ್ಪಿಸದೆ ಎದ್ದು ಹೊರ ನಡೆದುಬಿಟ್ಟಳು.

ಡಾ. ರೂಪಾರಿಗೆ ಆಗಲೇ ಒಂದಷ್ಟು ಸ್ಪಷ್ಟತೆ ಸಿಕ್ಕಿತು. ಕೇಸ್‌ನ ಕೊನೆಯ ಹಂತಕ್ಕೆ ಅವರಾಗಲೇ ಬಂದಿದ್ದರು.

ತಮ್ಮ ಡೈರಿಯಲ್ಲಿ ತಾವು ಕಂಡ ಅಬ್ಸರ್ವೇಷನ್‌ಗಳನ್ನು ಬರೆದಿಡುವುದು ಅವರಿಗೊಂದು ರೂಢಿ. ಅಂದಿನ ನಿವಿಯ ಭೇಟಿಯಲ್ಲೂ ಅವರು ಪ್ರಮುಖವಾಗಿ ಕಂಡಿದ್ದು ಅವಳ ವರ್ತನೆ.

ಕನ್ಫಾಬುಲೇಷನ್! ಅಂದರೆ ಯಾವುದೇ ರೀತಿಯ ಮೋಸಗೊಳಿಸುವ ಉದ್ದೇಶವಿಲ್ಲದೆ ಗೊಂದಲದಿಂದ ಹೇಳಿರುವ ಸುಳ್ಳು ಅಥವಾ ಪ್ರಾಮಾಣಿಕ ಸುಳ್ಳು! ಅದು ಹತ್ತಿಕ್ಕಿದ ಸ್ಮೃತಿಯ ಕಾರಣಗಳಿಂದ ಇರಬಹುದು. ಆ ಕ್ಷಣಕ್ಕೆ ಏನು ಹೇಳಬೇಕೆಂದು ತೋಚದೆ ಒಂದು ಭ್ರಮಾಧೀನ ಸ್ಥಿತಿಯಲ್ಲಿದ್ದು ತಾನೇ ಊಹಿಸಿಕೊಂಡ ಒಂದು ಘಟನೆಯಲ್ಲಿ ತಾನೇ ಪಾತ್ರಧಾರಿಯಾಗಿ ಕಲ್ಪಿಸಿ ಹೇಳಿಕೊಂಡ ಸುಳ್ಳೂ ಇರಬಹುದು!

ಇಂಥ ಮನಸ್ಥಿತಿಯಲ್ಲಿ ನಲುಗುವವರು ಉತ್ತಮ ಕಥೆಗಾರರೆಂದು ಅವರು ತಮ್ಮ ಪಿಎಚ್. ಡಿ. ಸಂದರ್ಭದಲ್ಲಿ ಇದೇ ವಿಷಯದಲ್ಲೇ ಅವರು ಥೀಸಿಸ್ ತಯಾರಿಸಿದ್ದರು.

ಅದರ ಪುರಾವೆಯಂತೆ ನಿವೇದಿತಾ ಅಂತರಂಗದ ಮಾತುಗಳನ್ನು ಪ್ರಾಮಾಣಿಕವಾಗಿ ಹಂಚಿಕೊಳ್ಳುವಾಗ ಅವಳು ತನ್ನನ್ನು ನೇರವಾಗಿ ದಿಟ್ಟಿಸಿಯೇ ಉತ್ತರಿಸುತ್ತಿದ್ದಳು. ಅದರಲ್ಲಿ ಯಾವ ಅಳುಕು, ವಂಚನೆ ಇರಲಿಲ್ಲ. ಹೃದಯದ ಮಾತುಗಳು ನೇರವಾಗಿ ಹೊರ ಬರುತ್ತಿತ್ತು.

ಯಾವಾಗ ಅದು ಅವಳ ಕಲ್ಪನೆಗಳ ಗಣಿಯಿಂದ ಹೊರಬರುತ್ತಿತ್ತೋ, ಆಗ ಅವಳೊಬ್ಬ ಸ್ಟೋರಿ ಟೆಲ್ಲರ್ ಅಂದರೆ ಕಥೆಗಾರ್ತಿಯಾಗಿ ಒಂದು ಕಥೆ ಹೆಣೆದು ಹೇಳುತ್ತಿದ್ದಳು. ಆಗೆಲ್ಲಾ ಅವಳು ನೇರವಾಗಿ ಮುಖ ನೋಡಿ ಉತ್ತರಿಸದೇ, ಬಲ ಬದಿಯ ಗೋಡೆಯ ಕಡೆಗೆ ಮುಖ ಮಾಡಿ ಉತ್ತರಿಸುತ್ತಿದ್ದಳು! ಆಗ ತನಗೆ ಸತ್ಯ ಯಾವುದು, ಮಿಥ್ಯೆ ಯಾವುದು ಎಂದು ಸುಲಭವಾಗಿ ಗ್ರಹಿಸಲು ಸಾಧ್ಯವಾಗಿತ್ತು. ಅಲ್ಲದೆ ಗಂಡಸರೆಲ್ಲರೂ ನಂಬಿಕೆಗೆ ಅರ್ಹರಲ್ಲ ಎನ್ನುವ ಭ್ರಮಾಧೀನ ಸ್ಥಿತಿ. ಅವಳಿಗೆ ಸ್ವತಃ ತನ್ನನ್ನು ಅಪಾರವಾಗಿ ಪ್ರೀತಿಸುವ ಪ್ರದೀಪನ ಬಗ್ಗೆಯೂ ನಂಬಿಕೆ ಇಲ್ಲ! ನಿಧಿಯನ್ನು ಹೆಚ್ಚು ಹೊತ್ತು ಅವನ ಕೈಗೆ ಬಿಡುವುದಿಲ್ಲ!

ಅವಳ ಮನದ ಪದರುಗಳಲ್ಲಿ ಹುದುಗಿರುವುದು, ಅವಳನ್ನು ಬಾಧಿಸುತ್ತಿರುವುದು, ಎಲ್ಲೋ ಬಾಲ್ಯದಲ್ಲಿ ಅವಳಿಗಾದ ಆಘಾತ! ಅದೇನಿರಬಹುದು? ಅದನ್ನು ಹೊರ ತೆಗೆಯಲು ತಾನೊಂದು ನಿಲುವಿಗೆ ಬರಲೇಬೇಕಿದೆ. ಅದು ಹಿಪ್ನಾಟಿಸಂ. ಅಂದರೆ ಸಮ್ಮೋಹನ ಚಿಕಿತ್ಸೆ. ಇದರಲ್ಲಿ ವ್ಯಕ್ತಿಯು, ಸ್ವಯಂ ಪ್ರೇರಿತ ಶಕ್ತಿಯನ್ನು ಕಳೆದುಕೊಂಡು ಚಿಕಿತ್ಸಕರ ನಿರ್ದೇಶನಕ್ಕೆ ಅಥವಾ ಸಲಹೆಗೆ ಸ್ಪಂದಿಸುತ್ತಾರೆ. ನಿಗ್ರಹಿಸಲ್ಪಟ್ಟ ನೆನಪುಗಳಿಂದ ಹೊರ ಬಂದು ಚೇತರಿಸಿಕೊಳ್ಳಲು, ಸಲಹೆಗಳ ಮೂಲಕ ಅವರ ನಡವಳಿಕೆಯನ್ನು ಮಾರ್ಪಡಿಸಲು ಪರಿಣಾಮಕಾರಿ ಚಿಕಿತ್ಸೆಯಾಗಿರುವ ಕಾರಣ, ಡಾ. ರೂಪಾ ಈ ನಿರ್ಧಾರಕ್ಕೆ ಬಂದಿದ್ದರು.

### ಅಧ್ಯಾಯ 8

ಪ್ರದೀಪನಿಗೆ ಕರೆ ಮಾಡಿ ಡಾ. ರೂಪಾ ತಮ್ಮ ನಿರ್ಧಾರ ತಿಳಿಸಿದಾಗ ಪ್ರದೀಪ ಕಸಿವಿಸಿಗೊಂಡಿದ್ದ. 'ಇದು ಅಗತ್ಯವಾ ಮೇಡಮ್? ಇದರಿಂದ ಪ್ರಯೋಜನ ಇದೆಯಾ?' ಎಂದು ಹಿಮ್ಮೆಟ್ಟುತ್ತಾ ಕೇಳಿದ.

'ಇದರಿಂದಲೇ ಪ್ರಯೋಜನ ಆಗೋದು. ಈ ಚಿಕಿತ್ಸೆಯ ನಂತರ ನಿಮಗೆ ಆಕೆ ಮಾನಸಿಕವಾಗಿ ಸಂಪೂರ್ಣ ಆರೋಗ್ಯಪೂರ್ಣವಾಗಿ ದೊರಕುತ್ತಾರೆ. ಆ ನಂಬಿಕೆ ನನಗಿದೆ. ನೀವು ಇದಕ್ಕೆ ಬೆಂಬಲಿಸಬೇಕು' – ಡಾ. ರೂಪಾ ಒತ್ತಿ ನುಡಿದಾಗ ಆಕೆಯ ಮೇಲೆ ನಂಬಿಕೆ ಇರಿಸಿದ್ದ ಪ್ರದೀಪ ಆಕೆಯ ಆಶ್ವಾಸನೆಗೆ ಧೈರ್ಯ ತಂದುಕೊಂಡು,

'ಸರಿ ಮೇಡಮ್, ನನಗೆ ಒಪ್ಪಿಗೆ ಇದೆ' ಎಂದ.

'ನನಗೆ ನಿಮ್ಮ ಒಪ್ಪಿಗೆ ಮುಖ್ಯವೇ ಅಲ್ಲ. ನನಗೆ ಬೇಕಾಗಿರುವುದು ನಿವೇದಿತಾಳ ಒಪ್ಪಿಗೆ. ಏಕೆಂದರೆ ಆಕೆಯ ಸಹಕಾರ ಇಲ್ಲದೇ ಇದನ್ನು ನಡೆಸಲಾಗುವುದಿಲ್ಲ' ಎಂದಾಗ ಪ್ರದೀಪನ ಮುಖ ಪೆಚ್ಚಾಯಿತು.

'ಆಕೆಯ ಒಪ್ಪಿಗೆಯ ಅಗತ್ಯ ಇದೆಯೇ? ಈ ಸಂಗತಿ ನಿವಿಗೆ ತಿಳಿದರೆ ಆಕೆ ಖಂಡಿತವಾಗಿ ನಿರಾಕರಿಸುತ್ತಾಳೆ'.

'ಇರಬಹುದು. ಆದರೆ ಆಕೆಗೆ ತಿಳಿಸದೇ ಇದನ್ನು ಮಾಡಲು ಸಾಧ್ಯವಿಲ್ಲ. ಅದು ನಮ್ಮ ವೃತ್ತಿಧರ್ಮ! ನನಗೆ ನನ್ನ ಎಥಿಕ್ಸ್ ವಿರುದ್ಧ ಹೋಗಲಾಗುವುದಿಲ್ಲ. ನೀವು ಹೇಗೆ ಆಕೆಯನ್ನು ಒಪ್ಪಿಸುತ್ತೀರೋ ಅದು